ಅಮರಯ್ಯಾ ಪತ್ರಿಮಠ, ಸುರಪುರ
'ಸಮಯ' ನಮಗಾಗಿ ಕಾಯುವುದು ಯಾವಾಗ?



ನಾವು ಬೆವರಿ ಸುಸ್ತಾಗುವಷ್ಟು ಕಾಯುವಂತಹ ಬೇಸಿಗೆಯ ಸಮಯ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಪೂಜಾರಿಯು ದೇವರ ಬಳಿ ವರವನ್ನು ಕೇಳುವುದಿಲ್ಲ. ಏಕೆ?
ಜಗವನ್ನೇ ಅರಿತವನಿಗೆ ಯಾರಿಗೇನು ಕೊಡಬೇಕೆಂದು ಗೊತ್ತಿರುತ್ತದೆಂದು ಗೊತ್ತು.

ವಿಜಯಕುಮಾರಿ ದಯಾನಂದನ್, ಚೆನ್ನೈ
ರಾವಣ, ವಿಭೀಷಣ ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದರೂ ಗುಣಗಳೇಕೆ ಭಿನ್ನ?
ಕಲ್ಲಿದ್ದಲು, ವಜ್ರ ಎರಡೂ ಇಂಗಾಲದ್ದೇ; ಸಡಿಲಗುಣವಾದರೆ ಕಲ್ಲಿದ್ದಲು, ಬಿಗಿಯಿದ್ದರೆ ವಜ್ರ.

ಪಿ.ಜೆ. ರಾಘವೇಂದ್ರ, ಮೈಸೂರು
ವಾರ್ತಾ ವಾಚಸ್ಪತಿಗಳು ಬೃಹಸ್ಪತಿಗಳಂತೆ ವರ್ತಿಸುತ್ತಾರಲ್ಲಾ?



weakಶಕರೇ ಕಾರಣವಂತೆ. ಕೇಳುವ ಕಿವಿಗಳಿದ್ದರೆ ಕತ್ತೆಯೂ ಕವಿಗೋಷ್ಠಿ ನಡೆಸೀತು.

ಆರ್. ಮಯೂರಿ, ಕೆನಡಾ
ಬ್ರೆಡ್ ಮೊದಲಾ? ಜಾಮ್ ಮೊದಲಾ?
ಜಾಮೇ. ಜೊತೆಗೆ ಸೇವಿಸಲೆಂದು 'ಗಿವ್ ಅಸ್ ಡೈಲಿ ಬ್ರೆಡ್' ಎಂದು ಭಕ್ತನು ಕೇಳಿದ್ದಂತೆ.

ರಾಜೇಂದ್ರ ಹೆಗಡೆ, ಹಾವೇರಿ
ವರ್ಷಕ್ಕೊಮ್ಮೆ/ಹುಣ್ಣಿಮೆ ಅಮಾವಾಸ್ಯೆಗೊಮ್ಮೆ/ ವಾರವಾರವೂ ಪ್ರಶ್ನಿಸುವವರಲ್ಲಿ ನೀವು ಯಾರಿಗೆ ಉತ್ತರಿಸುತ್ತೀರಿ?
ವರ್ಷದ್ದೇ; ಕೌತುಕವರ್ಷ, ಕೀಟಲೆವರ್ಷ, ವಿಡಂಬನವರ್ಷ ಸ್ಫುರಿಸುವ ಪ್ರಶ್ನೆಗೇ ಆದ್ಯತೆ.

ಸಿ.ಕೆ. ಗಣಪ್ಪನವರ, ಮುಂಡರಗಿ
ಶಾಸಕ, ಮಂತ್ರಿಗಳನ್ನು ಕೈಹಿಡಿದು ಕೇಳುವ ಪ್ರವೃತ್ತಿ ಮತದಾರರಲ್ಲಿ ಕಡಿಮೆಯಾಗಿದೆಯಲ್ಲ?
ಕೈ ಒಡ್ಡುವವರಿಗೆ ಕೈ ಹಿಡಿಯುವ ಧೈರ್ಯ, ಅರ್ಹತೆ ಇರುವುದಿಲ್ಲ.

ವೈ.ವಿ. ಪ್ರಭಾಕರ, ಬೆಂಗಳೂರು
ನೀವು ಎಂದಾದರೂ ಆನ್‌ಲೈನ್ ಟೋಪಿ ಹಾಕಿಸಿಕೊಂಡಿದ್ದೀರಾ?
ಆಹಾ! ನಿಮ್ಮ ಸಾಲಿನಲ್ಲಿ ನನ್ನನ್ನು ಕಾಣಲು ಅದೇನು ಆತುರವೋ!

ಸುಧೀಂದ್ರ, ಬೆಂಗಳೂರು
ಅಯ್ಯೋ! ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಹೊರಡುವಾಗ ಬಾಯ್ತಪ್ಪಿ 'ಬರ್ತೀನಿ' ಎಂದುಬಿಟ್ಟೆ...?
ಸುಂದರವಾದ ನರ್ಸುಗಳೋ, ರಿಸೆಪ್ಷನಿಸ್ಟೋ ಇದ್ದರೆ ರೋಗಿಗಳು ಹಾಗೆನ್ನುವುದು ಸಹಜವಂತೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಗುರುಗಳೆ, ರಕ್ತವನ್ನು ಸುರಿಸದೇ ಕೊಲ್ಲುವುದು ಯಾವುದು?
ನಾವೇ ಬೆಳೆಸಿದವರ ಅನಾದರ, ನಿರ್ಲಕ್ಷ್ಯ.

ಸಿಹಿಮೊಗೆ ರಮೇಶ್, ಮೈಸೂರು
ದೇಗುಲಗಳಲ್ಲಿ ನಮಗೆ ಗಂಟೆಗಟ್ಟಲೆ ಕಾದರೂ ಸಿಗದ ದರ್ಶನ ಜುಜುಬಿ ರಾಜಕಾರಣಿಗೆ ಥಟ್ಟನೆ ಸಿಗುವುದೇಕೆ?
ಸ್ವಚ್ಛವಾದ ದೇಗುಲದಲ್ಲಿ ಕೊಳಕು ಹೆಚ್ಚು ಹೊತ್ತು ಇರದಿರಲೆಂದು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಕಷ್ಟಗಳು ಬಹಳ ಹೊತ್ತು ನಿಲ್ಲುವುದಿಲ್ಲ. ಏಕೆ?
ತಾಳ್ಮೆ, ಪರಿಶ್ರಮ, ನೆರವುಗಳೆಂಬ ಕೋಲುಗಳು ಇವನ್ನು ಹೊಡೆದೋಡಿಸುವುದರಿಂದ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಶಿವದೇಗುಲದಲ್ಲಿ ಪಾರ್ವತಿ, ವಿಷ್ಣುದೇಗುಲದಲ್ಲಿ ಲಕ್ಷ್ಮಿ; ಸರಸ್ವತಿಯ ದೇಗುಲದಲ್ಲಿ ಬ್ರಹ್ಮನೇಕಿರುವುದಿಲ್ಲ?
'ವಿದ್ಯಾವಂತೆ, ಜಾಣೆ. ತನ್ನನ್ನು ತಾನು ನೋಡಿಕೊಳ್ಳುತ್ತಾಳೆ' ಎಂದನಂತೆ ಬ್ರಹ್ಮ.

**ಬಹುಮಾನಿತ ಪ್ರಶ್ನೆ**

ಶೇಖರಯ್ಯ ಟಿ.ಎಚ್.ಎಂ. ಗೆದ್ದಲಗಟ್ಟೆ
ಮೊಬೈಲ್ ಫೋನ್ ಬಂದೋ, ಬ್ಯಾನೋ ಆದರೆ ಏನಾಗಬಹುದು?
ಮೊಬೈಲ್ ಗೀಳಿನವರಿಂದ ಹುಚ್ಚಾಸ್ಪತ್ರೆ ಹೌಸ್‌ಫುಲ್ ಆಗಬಹುದು.

ಮಲ್ಲಿಕಾರ್ಜುನ, ಸುರಧೇನುಪುರ
ಸೊಳ್ಳೆಗಳು ಸರ್ವಾಂತರ್ಯಾಮಿ ಆಗಲು ಕಾರಣವೇನು?
ಸರ್ವ ಜನಾಂಗದ ಕೊಳಕಿನ ಪರಿಸರ, ಮಶಕದ ಕಂಗಳ ಸೆಳೆವ ಶರೀರ.

ಜಿ. ಪ್ರದೀಪಕುಮಾರ್, ಹೂವಿನಹಡಗಲಿ
ಅವಕಾಶಕ್ಕಾಗಿ ಕಾಯುವುದಕ್ಕೂ, ಅವಕಾಶಗಳನ್ನು ಸೃಷ್ಟಿಸಿಕೊಳ್ಳುವುದಕ್ಕೂ ವ್ಯತ್ಯಾಸ?
ಕಾಯುವಿಕೆ ಟೆಸ್ಟ್ ಮ್ಯಾಚ್; ಸೃಷ್ಟಿಸಿಕೊಳ್ಳುವಿಕೆ ಟಿ20.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ದಪ್ಪ ವಧುವಿಗೆ ಸಣಕಲ ವರ; ಸಣಕಲ ವರನಿಗೆ ದಪ್ಪ ವಧು. ಏನೀ ಲಗ್ನರಹಸ್ಯ?



ದಂಪತಿಗಳ ಟೋಟಲ್ ಗಾತ್ರ, ತೂಕ ಇಷ್ಟಿರಬೇಕೆಂಬ ನಿಯಮವಂತೆ.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ದೇಶದ ಪ್ರಗತಿಗೆ ಎಲ್ಲರೂ ಕೈಜೋಡಿಸಬೇಕಲ್ಲವೆ?
ಹೌದು. ಕೆಲವರಿಗಂತೂ 'ದಯವಿಟ್ಟು ತಪ್ಪಗಿರಿ' ಎಂದು ಎರಡೂ ಕೈಯೆತ್ತಿ ಜೋಡಿಸಬೇಕು.

ಬಿ. ಚಂದ್ರೇಗೌಡ, ಬೆಂಗಳೂರು
ಮದುವೆಗೆ 'ಪಾಣಿಗ್ರಹಣ' ಎಂಬ ಹೆಸರೇಕೆ?
ಕನ್ಯಾಪಿತೃ ಕನ್ಯೆಗೆ ಸೂಕ್ತ ಪ್ರಾಣಿಯನ್ನು ಹಿಡಿದು ತರುವನಲ್ಲ; ಅದರ ಮೂಲ 'ಪ್ರಾಣಿಗ್ರಹಣ'ವಂತೆ!

ಬಾ.ರಂ. ಸುರೇಶ್, ಶಿವಮೊಗ್ಗ
ಇತ್ತೀಚೆಗೆ ಲಿವಿಂಗ್ ಟುಗೆದರ್, ವಿಚ್ಛೇದನಗಳಿಗೇ ಪ್ರಾಶಸ್ತ್ಯ. ಮುಂದೇನಾಗಬಹುದು?
ಜನಸಂಖ್ಯೆ ಕಡಿಮೆ ಆಗಬಹುದು.

■ ರಾಮ್